# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ ನಂ. **228/2018** ಸಿ.ಡಬ್ಲ್ಯೂ -18

ಪಿ.ಡಬ್ಲ್ಯೂ -14

| | | |
|---|---|---|
| ಹೆಸರು | ಃ | ಗಂಗಪ್ಪಾ |
| ತಂದೆಃಗಂಡ | ಃ | ಶೆನಶೆಪ್ಪಾ ಕೆರೂರ |
| ವಯಸ್ಸು | ಃ | ೬೨ ವರ್ಷ |
| ಉದ್ಯೋಗ | ಃ | ಹಿರಿಯ ವಾಹನ ನೀರಿಕ್ಷಕರು |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ09.10.2025

ಸತ್ಯ ಪ್ರತಿಜ್ಞೆಯ ಮೇರೆಗೆ.

---

**<u>ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ</u>**

ನಾನು ದಿಃ 12-03-2012 ರಿಂದ ದಿಃ 30-06-2023 ರವರೆಗೆ ನಾನು ಆರ್.ಟಿ.ಓ ಕಚೇರಿ ಕಲಬುರಗಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿ: 13-11-2017 ರಂದು ಬೆ, 10.30 ಗಂಟೆಗೆ ಸಿ.ಪಿ.ಐ ಆಳಂದ ಪೋಲಿಸ್ ಠಾಣೆ ಅವರಿಂದ ಅಪಘಾತಕ್ಕಿಡಾದ ವಾಹನಗಳ ಪರಿವೀಕ್ಷಣೆಯ ಕುರಿತು ಮನವಿ ಬಂದ ಮೇರೆಗೆ, ಅದೇ ದಿನ ಮ. 3.00 ಗಂಟೆಗೆ ನಿಂಬರ್ಗಾ ಪೋಲಿಸ್ ಠಾಣೆಗೆ ಭೇಟಿ ನೀಡಿ ಅಲ್ಲಿಯೇ ಆವರಣದಲ್ಲಿ ನಿಂತಿದ್ದ, ಅಪಘಾತಕ್ಕಿಡಾದ ವಾಹನಗಳ ಸಂಖ್ಯೆ ಕೆ ಎ 32/ಇಎಲ್-0534 ಮತ್ತು ಎರಡನೇ ವಾಹನ ಎಮ ಎಚ್-12/ಬಿ ಜಿ-7085 ಈ ವಾಹನಗಳನ್ನು ಪರಿವೀಕ್ಷಣೆ ಕೊಳ್ಳಲಾಗಿ ಒಂದನೇ ವಾಹನ ಕೆ ಎ 32/ಇಎಲ್-0534 ವಾಹನಕ್ಕೆ ಈ ಕೆಳಗಿನಂತೆ ಜಖಂಗಳು ಕಂಡು ಬಂದಿರುತ್ತವೇ.

1. ಫ್ರಂಟ್ ವಿಲ್ ಮಡ್ಡ ಗಾರ್ಡ ಜಖಂ ಗೊಂಡಿತ್ತು.
2. ಎರಡು ಹ್ಯಾಂಡಲಗಳು ಬೆಂಡಾಗಿದ್ದವು.
3. ಹೆಡ್ಡಲೈಟಿನ ಕವರ ಮುರಿದಿತ್ತು.
4. ಮುಂ ದಿನ ಎರಡು ಇಂಡಿಕೇಟರಗಳು ಜಖಂಗೊಂಡಿತ್ತು.
5. ಬಲಬದಿಯ ಲೆಗ್ಗಗಾರ್ಡ ಜಖಂ ಗೊಂಡಿತ್ತು.
6. ಮುಂದಿನ ಎರಡು ಚಕ್ರಗಳು ಜಖಂಗೊಂಡಿತ್ತು.
7. ಎಡಬದಿಯ ಬ್ಯಾಟರಿಯ ಬಾಕ್ಸನ ಕವರ ಜಖಂಗೊಂಡಿತ್ತು.
8. ಪುಟಗೇರ ಲೀವರ ಪ್ರೇಸ್ ಆಗಿ ಜಖಂಗೊಂಡಿತ್ತು.

<u>ಅದೇ ರೀತಿ ಎಮ ಎಚ್-12/ಬಿ ಜಿ-7085ವಾಹನಕ್ಕೆ ಈ ಕೆಳಗಿನಂತೆ ಜಖಂಗಳು ಕಂಡು ಬಂದಿರುತ್ತವೇ.</u>

1. ಫ್ರಂಟ್ ಭಂಪರ ಪ್ರೇಸ್ಸ ಇನವರ್ಡ ಆಗಿ ಜಖಂ ಗೊಂಡಿತ್ತು.
2. ಬಲಗಡಿಯ ಹೆಡ್ಡಲೈಟ ಜಖಂ ಗೊಂಡಿತ್ತು.
3. ಮುಂದಿನ ವಿಂಡ ಸ್ರೀನ್ ಗ್ಲಾಸ್ ಜಖಂ ಗೊಂಡಿತ್ತು.
4. ಫಂಟ್ ಲೆಫಟ್ ಸೈಡ ವಿಲ್ ಮಡ್ಡಗಾರ್ಡ ಪ್ರೆಸಡ ಆ್ಯಂಡ ಡ್ಯಾಮೇಜ್.
5. ಟಾಪ್‌ಹುಡ್ ಕಂಪ್ಲಲಿಟಲಿ ಪ್ರೆಸ್ ಆ್ಯಂಡ ಡ್ಯಾಮೇಜ್.

ಈ ಎರಡು ವಾಹನಗಳನ್ನು ನಿಂತ ಸ್ಥಳದಲ್ಲಿ ಪರಿಶೀಲನೆ ಮಾಡಲಾಗಿ ಎರಡು ವಾಹನಗಳ ಬ್ರೇಕ ಕರೆಕ್ಷನಷ ಮತ್ತು ಅದರ ಸಿಸಟಂಮ ಚೆನ್ನಾಗಿ ಇತ್ತು. ನನ್ನ ಅಭಿಪ್ರಾಯದ ಪ್ರಕಾರ ಈ ಎರಡು ವಾಹನಗಳ ಅಪಘಾತವು ಯಾವುದೇ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಅಂತಾ ನಾನು ಪೋಲಿಸರಿಗೆ ವರದಿ ನೀಡಿರುತ್ತೇನೆ.

ಸಾಕ್ಷಿ ದಿಃ 13-11-2017 ರಂದು ನೀಡಿದ ಎಮ.ವಿ.ಇ ವರದಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ. 11, ಸಾಕ್ಷಿಯ ಸಹಿಯನ್ನು ನಿಪಿ. 11 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರಿ. ಎ.ಡಬ್ಲೂ.ಎ ವಕೀಲರಿಂದಃ</u>

ಸದರಿ ವಾಹನಗಳು ಎಷ್ಟು ದಿನಗಳಿಂದ ಪೋಲಿಸ್ ಠಾಣೆಯಲ್ಲಿ ನಿಂತಿದ್ದವು ಅಂತಾ ನನಗೆ ಹೇಳಲು ಬರುವುದಿಲ್ಲ. ಸದರಿ ವಾಹನಗಳು ಚಾಲ್ತಿಯಲ್ಲಿ ಇರಲಿಲ್ಲ. ನಾನು ಸದರಿ ವಿಷಯವನ್ನು ನಿಪಿ. 11 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ವಾಹನವು ಅತೀ ವೇಗದಿಂದ ಚಲಾಯಿಸಿದಾಗ ಯಾವುದಾದರೂ ತಗ್ಗಿನಲ್ಲಿ ಬಿದ್ದಾಗ ಮೇಲೆ ತಿಳಿಸಿದ ರೀತಿಯಲ್ಲಿ ಜಖಂ ಆಗುತ್ತವೆ ಎಂದರೆ ಸರಿಯಲ್ಲ, ನಾನು ಸದರಿ ವಾಹನಗಳ ಭಾವ ಚಿತ್ರ ತೆಗೆದುಕೊಂಡಿರುವುದಿಲ್ಲ. ನಾನು ಸದರಿ ವಾಹನಗಳನ್ನು ಚಾಲಯಿಸಿ ನೋಡಿಲ್ಲ ಎಂದರೆ ಸರಿ. ನಿಪಿ. 11 ರ ಕಾಲಂ ನಂಬರ 7 ರಲ್ಲಿ ನಮೂದಿಸಿದ ಡ್ಯಾಮೇಜಸ್ ಡ್ಯೂ ಟೂ ಇನಪ್ಯಾಕ್ಟ ಅಂತಾ ನಮೂದಿಸಿದ್ದು ಅದನ್ನು ಯಾರು ತಿಳಿಸಿರುತ್ತಾರೆ ಎಂದರೆ ಯಾರು ತಿಳಿಸುವ ಅವಶ್ಯಕತೆ ಇರುವುದಿಲ್ಲ ಅಂತಾ ನುಡಿಯುತ್ತಾರೆ. ನನಗೆ ಯಾವುದೇ ಜ್ಞಾನ ಇಲ್ಲದೇ ಇದ್ದರೂ ಸಹಿತ ನಾನು ಸದರಿ ವಿಷಯವನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ವರದಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಂಬರ್ಗಾ ಪೋಲಿಸ್ ಠಾಣೆಗೆ ಯಾವತ್ತು ಭೇಟಿ ನೀಡಿಲ್ಲ ಮತ್ತು ಯಾವುದೇ ವಾಹನವನ್ನು ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ ನಾನು ಪೋಲಿಸ್ ಠಾಣೆಗೆ ಭೇಟಿ ನೀಡಿದ ಬಗ್ಗೆ ಪೋಲಿಸ್ ಠಾಣೆಯಲ್ಲಿ ನಮೂದು ಮಾಡಿಲ್ಲ ಆದರೆ ಸಾಕ್ಷಿಯು ಮುಂದುವರೆದು ಅದರ ಅವಶ್ಯಕತೆ ಇಲ್ಲ ಅಂತಾ ನುಡಿಯುತ್ತಾರೆ. ನನಗೆ ವಾಹನಗಳನ್ನು ಯಾರು ತೋರಿಸಿರುವುದಿಲ್ಲ, ನಾನೇ ಹೋಗಿ ಗುರುತು ಹಿಡಿದಿರುತ್ತೇನೆ. ನನಗೆ ಪೋಲಿಸರಿಂದ ಯಾವುದೇ ಮನವಿ ಬಂದಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಪೋಲಿಸರಿಂದ ಮನವಿ ಬಂದಿತ್ತು ಎಂದರೆ ಸಾಕ್ಷಿಯು ನಮಗೆ ನೇರವಾಗಿ ಮನವಿ ಬರುವುದಿಲ್ಲ, ಕಚೇರಿಯ ಮೂಲಕ ಮನವಿ ಬಂದಿರುತ್ತದೆ ಅಂತಾ ತಿಳಿಸಿರುತ್ತಾರೆ. ನನಗೆ ಈ ಪ್ರಕರಣದಲ್ಲಿ ಯಾವುದೇ ರೀತಿಯ ಪೋಲಿಸರಿಂದ ವಾಹನದ ಪರೀಶಿಲನೆಗಾಗಿ ಮನವಿ ಬಂದಿರುವುದಿಲ್ಲ ಎಂದರೆ ಸರಿ. ನಾವು ನಮ್ಮ ಕಚೇರಿಯಿಂದ ವರದಿ ಕಳುಹಿಸಿದಾಗ ಅದಕ್ಕೆ ಔಟವರ್ಡ ನಂಬರ ಇರುತ್ತದೆ ಎಂದರೆ ಸರಿ. ನಿಪಿ. 11 ರಲ್ಲಿ ಔಟವರ್ಡ ನಂಬರ ಇಲ್ಲ ಎಂದರೆ ಸಾಕ್ಷಿಯು ಅದನ್ನು ಕಚೇರಿಯ ಮೂಲಕ ಕಳುಹಿಸಿದ ಕಾರಣ ನನಗೆ ಗೊತ್ತಿಲ್ಲ ಅಂತಾ ನುಡಿಯುತ್ತಾರೆ. ನಾನು ಈ ದಿನ ಸಾಕ್ಷಿಯನ್ನು ನಾನು ನೀಡಿದ ವರದಿಯನ್ನು ನೋಡಿ ಹೇಳುತ್ತಿದ್ದೇನೆ ಎಂದರೆ ಸರಿ. ನಾನು ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.